575(699) ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ) ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವಿವಿಧ ಜಾನುವಾರು ಕೇಂದ್ರಗಳು ಯಾವುವು?

ಆ) ಪ್ರತಿ ಜಾನುವಾರುಗಳ ಕೇಂದ್ರದ ಅಧೀನದಲ್ಲಿರುವ ಇಲಾಖಾ ಜಮೀನಿನ ವಿಸ್ತೀರ್ಣವೆಷ್ಟು?

ಇ) ಪ್ರತಿ ಜಾನುವಾರು ಕೇಂದ್ರಗಳಲ್ಲಿ ಸಾಕಲಾಗುತ್ತಿರುವ ವಿವಿಧ ತಳಿಗಳು ಯಾವುವು?

ಈ) ಪ್ರತಿ ಜಾನುವಾರು ಕೇಂದ್ರಗಳಿಗೆ 2004–05, 2005–06 ಮತ್ತು 2006–07 ರಲ್ಲಿ ಸರ್ಕಾರ ಒದಗಿಸಿರುವ ಅನುದಾನವೆಷ್ಟು?

ಉ) ಈ ಅನುದಾನದಲ್ಲಿ ಸಿಬ್ಬಂದಿಯವರ ವೇತನ ಹೊರತುಪಡಿಸಿದರೆ ಜಾನುವಾರುಗಳ ಸಾಕುವಿಕೆಗೆ ವಿನಿಯೋಗಿಸಲಾಗುತ್ತಿರುವ ಹಣ ಎಷ್ಟು?

ಊ) ಈ ಕೇಂದ್ರಗಳಿಗೆ ಮಂಜೂರಾಗಿರುವ ಪಶುವೈದ್ಯರ/ತಾಂತ್ರಿಕ ಸಿಬ್ಬಂದಿ/ ಲಿಪಿಕ ಸಿಬ್ಬಂದಿ ಎಷ್ಟು?

ಋ) ಇವುಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು ಮತ್ತು ಇವುಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 11 ವಿವಿಧ ಜಾನುವಾರು ಕೇಂದ್ರಗಳಿದ್ದು ಅವುಗಳ ವಿವರ ಅನುಬಂಧ–1 ರಲ್ಲಿ ನೀಡಿದೆ

ಆ) ಎಲ್ಲಾ ಜಾನುವಾರು ಕೇಂದ್ರದ ಅಧೀನದಲ್ಲಿರುವ ಜಮೀನಿನ ವಿಸ್ತೀರ್ಣ 23969 32 ಹೆಕ್ಟೇರ್ ಇದ್ದು, ಅನುಬಂಧ–1 ರಲ್ಲಿ ಕ್ಷೇತ್ರವಾರು ಸಲ್ಲಿಸಿದೆ

ಇ) ಎಲ್ಲಾ ಜಾನುವಾರು ಕೇಂದ್ರಗಳಲ್ಲಿ ಸಾಕಲಾಗುತ್ತಿರುವ ತಳಿಗಳ ವಿವರಗಳನ್ನು ಕ್ಷೇತ್ರವಾರು ಅನುಬಂಧ–1ರಲ್ಲಿ ನೀಡಿದೆ

ಈ) ಎಲ್ಲಾ ಜಾನುವಾರು ಕೇಂದ್ರಗಳಿಗೆ ಒಟ್ಟು ರೂ 1347 215 ಲಕ್ಷ ಒದಗಿಸಿದ್ದು, ಕ್ಷೇತ್ರವಾರು, ವರ್ಷಾವಾರು ವಿವರವನ್ನು ಅನುಬಂಧ–2ರಲ್ಲಿ ಸಲ್ಲಿಸಿದೆ

ಊ) ರೂ 402 543 ಲಕ್ಷ ರೂ ಗಳನ್ನು ಜಾನುವಾರು ಸಾಕುವಿಕೆಗೆ ಉಪಯೋಗಿಸಲಾಗಿದೆ ಕ್ಷೇತ್ರವಾರು ವಿವರಗಳನ್ನು ಅನುಬಂಧ–3ರಲ್ಲಿ ಸಲ್ಲಿಸಿದೆ ?

ಋ) ಈ ಕ್ಷೇತ್ರಗಳಲ್ಲಿ ಒಟ್ಟಾರೆ 33 ಪಶುವೈದ್ಯರ 63 ತಾಂತ್ರಿಕ ಮತ್ತು 47 ಲಿಪಿಕ ವರ್ಗದ ಹುದ್ದೆಗಳು ಮಂಜೂರಾಗಿವೆ

ಌ) ಇವುಗಳಲ್ಲಿ 8 ಪಶುವೈದ್ಯರ 37 ತಾಂತ್ರಿಕ ಮತ್ತು 15 ಲಿಪಿಕ ಹುದ್ದೆಗಳು ಖಾಲಿ ಇರುತ್ತವೆ

ಶೇಕಡಾ 90ರಷ್ಟು ಸಹಾಯಕ ನಿರ್ದೇಶಕ ಹುದ್ದೆಗಳನ್ನು ಮುಂಬಡ್ತಿ ಮುಖೇನ ಭರ್ತಿ ಮಾಡಲಾಗುವುದು ಶೇ 10% ರಷ್ಟು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಬೇಕಾಗಿದ್ದು 4 ಸಹಾಯಕ ನಿರ್ದೇಶಕರ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಬೇಕಾಗಿದ್ದು 4 ಸಹಾಯಕ ನಿರ್ದೇಶಕರ ಹುದ್ದೆಗಳನ್ನು ನೇರ ನೇಮಕಾತಿಗಾಗಿ ಕರ್ನಾಟಕ ಲೋಕ ಸೇವಾ ಆಯೋಗದ ಮುಖಾಂತರ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡುವ ಕ್ರಮ ಇದ್ದು, ಪ್ರಸ್ತುತ ಕರ್ನಾಟಕ ಲೋಕ ಸೇವಾ ಆಯೋಗದಿಂದ 41 ಪಶುವೈದ್ಯಾಧಿಕಾರಿಗಳ ನೇಮಕಾತಿಗೆ ಸಂದರ್ಶನ ಮುಗಿದಿದ್ದು, ನೇಮಕಾತಿ ಆದೇಶ ನೀಡಬೇಕಾಗಿದೆ ಮತ್ತೆ 77 ಪಶುವೈದ್ಯಾಧಿಕಾರಿಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದ ಮುಖಾಂತರ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ವಿಶೇಷ ನೇಮಕಾತಿ ನಿಯಮ 2003ರ ಅಡಿ 577 ಪಶುವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಬೇಕಾಗಿದ್ದು, ಇದುವರೆಗೆ 383 ಪಶುವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಲಾಗಿದ್ದು, ಉಳಿಕೆ 194 ಪಶುವೈದ್ಯಾಧಿಕಾರಿಗಳ ನೇಮಕಾತಿ ಮಾಡಲು ಪ್ರಸ್ತಾವನೆ ಸಹ ಪರಿಶೀಲನೆಯಲ್ಲಿದೆ ಪಶುವೈದ್ಯಕೀಯ ಮೇಲ್ವಿಚಾರಕರು ಮತ್ತು ಹಿರಿಯ ಪಶುವೈದ್ಯಕೀಯ ಪರೀಕ್ಷಕರು ಹುದ್ದೆಯನ್ನು ಮುಂಬಡ್ತಿ ಮುಖೇನ ಭರ್ತಿ ಮಾಡಲಾಗುತ್ತದೆ 300 ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ಇಲಾಖೆಯಲ್ಲಿನ ಎಸ್ ಎಸ್ ಎಲ್ ಸಿ ಪಾಸಾದ ಡಿ ದರ್ಜೆ ನೌಕರರಿಗೆ ತರಬೇತಿ ನೀಡಿ ಬಡ್ತಿ ಮುಖೇನ ತುಂಬಲು ಕ್ರಮವಹಿಸಿದ್ದು ಈಗಾಗಲೇ 244 ಡಿ ದರ್ಜೆ ನೌಕರರಿಗೆ ತರಬೇತಿ ನೀಡಲಾಗಿದೆ ಎಸ್ ಎಸ್ ಎಲ್ ಸಿ ಅಂಕಪಟ್ಟಿ ಪರೀಕ್ಷೆ ಮಂಡಳಿಯ ಪರಿಶೀಲನೆಗೆ ಕಳುಹಿಸಿದ್ದು ವರದಿ ಬಂದ ಕೂಡಲೇ ಭರ್ತಿ ಮಾಡಲು ಕ್ರಮ ಜರುಗಿಸಲಾಗುವುದು 300 ಡಿ

ದರ್ಜೆ ನೌಕರರ ಹುದ್ದೆಗಳನ್ನು ಔಟ್ ಸೋರ್ಸ್ ಮುಖೇನ ಭರ್ತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ

ಅನುಬಂದ–1

ರಾಜ್ಯದಲ್ಲಿರುವ ವಿವಿಧ ಜಾನುವಾರು ಕೇಂದ್ರಗಳು ಯಾವುವು?	ಪ್ರತಿ ಜಾನುವಾರುಗಳ ಕೇಂದ್ರದ ಅಧೀನ ದಲ್ಲಿರುವ ಇಲಾಖಾ ಜಮೀನಿನ ವಿಸ್ತೀರ್ಣ ಎಷ್ಟು? ಹೆಕ್ಟೇರುಗಳಲ್ಲಿ	ಪ್ರತಿ ಜಾನುವಾರು ಕೇಂದ್ರಗಳಲ್ಲಿ ಸಾಕಲಾಗುತ್ತಿರುವ ವಿವಿಧ ತಳಿಗಳು ಯಾವುವು?
1	2	3
ಪ್ರತಿ ಜಾನುವಾರು ತಳಿ ಸಂವರ್ಧನ ಮತ್ತು ತರಬೇತಿ ಕೇಂದ್ರ, ಹೆಸರಘಟ್ಟ	441 06	ಜರ್ಸಿ, ಮಿಶ್ರತಳಿ ಪಶುಗಳು ಹಾಗೂ ಜರ್ಸಿ, ಹೆಚ್ಎಫ್, ಸೂರ್ತಿ ಮತ್ತು ಮುರ್ರಾ ತಳಿ ಹೋರಿಗಳು
ಜಾನುವಾರು ತಳಿ ಸಂವರ್ಧನಾ ಕೇಂದ್ರ, ಹೆಸರುಘಟ್ಟ ಜಾನುವಾರು	400 00	ಮಿಶ್ರತಳಿ ಹಸುಗಳು, ಹಳ್ಳಿಕಾರ್ ಮತ್ತು ಅಮೃತ್ ಮೆಪಲ್ ಹೋರಿಗಳು
ತಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ ಧಾರವಾಡ ಜಿಲ್ಲೆ	25 20	ಹೆಚ್ಎಫ್, ಜರ್ಸಿ, ಖಿಲ್ಲಾರ್ ಹೋರಿಗಳು, ಸೂರ್ತಿ ಮತ್ತು ಮುರ್ರಾ ಕೋಣಗಳು
ಜಾನುವಾರು ತಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕುರಕುಪ್ಪಿ, ಬಳ್ಳಾರಿ ಜಿಲ್ಲೆ	273 60	ನಂದಿದುರ್ಗ, ಜಮ್ನಾಪಾರಿ ಆಡುಗಳು ರ್ಯಾಂಬುಲೆ ಮಿಶ್ರತಳಿ ಕುರಿಗಳು
ಜಾನುವಾರು ತಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಮುನಿರಾಬಾದ್, ರಾಯಚೂರು ಜಿಲ್ಲೆ	106 00	---

ಜಾನುವಾರು ತಳಿ ಸಂವರ್ಧನಾ ಕೇಂದ್ರ ಕೊಯ್ಲಾ ದಕ ಜಿಲ್ಲೆ	308 00	ಜರ್ಸಿ, ಹೆಚ್‌ಎಫ್ ಮಿಶ್ರತಳಿ ಮತ್ತು ಸೂರ್ತಿ ಎಮ್ಮೆಗಳು
ಜರ್ಸಿ ತಳಿ ಸಂವರ್ಧನಾ ಕೇಂದ್ರ ಕೂಡಿಗೆ ಕೊಡಗು ಜಿಲ್ಲೆ	56 00	ಜರ್ಸಿ ತಳಿ
ಎಮ್ಮೆ ತಳಿ ಸಂವರ್ಧನಾ ಕೇಂದ್ರ ಧಾರವಾಡ ಜಿಲ್ಲೆ	131 02	ಸೂರ್ತಿ ಮತ್ತು ಮುರ್ರಾ
ಬಿಲ್ಲಾರ್ ತಳಿ ಸಂವರ್ಧನಾ ಕೇಂದ್ರ, ಬಂಕಾಪುರ, ಹಾವೇರಿ ಜಿಲ್ಲೆ	55 64	ಬಿಲ್ಲಾರ್
ಹಳ್ಳಿಕಾರ್ ತಳಿ ಸಂವರ್ಧನಾ ಕೇಂದ್ರ ಕಾಣಕೇನಹಳ್ಳಿ, ತುಮಕೂರು ಜಿಲ್ಲೆ	270 00	ಹಳ್ಳಿಕಾರ್
ಅಮೃತ್ ಮಹಲ್ ತಳಿ ಸಂವರ್ಧನಾ ಕೇಂದ್ರ ಅಜಂಪುರ, ಚಿಕ್ಕಮಗಳೂರು ಜಿಲ್ಲೆ ಮತ್ತು ಉಪಕೇಂದ್ರಗಳು (ಬೀರೂರು, ಲಿಂಗದಹಳ್ಳಿ, ದಾಸೂರು, ಚಿಕ್ಕಮಗಳೂರು, ಕ್ಯೈನೋಡು ಹಾಗೂ ಹಬ್ಬನಘಟ್ಟ	21801 00 (ಕೇಂದ್ರ ಮತ್ತು ಉಪಕೇಂದ್ರಗಳ ಹಾಗೂ ಇತರೆ ಸಂಸ್ಥೆಗಳಿಗೆ ನೀಡಿರುವ ಪ್ರದೇಶಗಳನ್ನು ಒಳಗೊಂಡಿರುತ್ತದೆ)	ಅಮೃತ್ ಮಹಲ್
	ಒಟ್ಟು	**23969.32**

ಅನುಬಂಧ–2

(ರೂ ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಕ್ಷೇತ್ರದ ಹೆಸರು	2004–05	2005–06	2006–07
1	ರಾಜ್ಯ ಜಾನುವಾರು ತಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ ಹೆಸರಘಟ್ಟ	92 37	103 33	83 6

2	ಜಾನುವಾರು ತಳಿ ಸಂವರ್ಧನಾ ಕ್ಷೇತ್ರ, ಹೆಸರಘಟ್ಟ	153 69	179 18	126 5
3	ಜಾನುವಾರು ತಳಿ ಸಂವರ್ಧನಾ ಕೇಂದ್ರ, ಧಾರವಾಡ ಜಿಲ್ಲೆ	49 45	66 52	61 44
4	ಜಾನುವಾರು ತಳಿ ಸಂವರ್ಧನಾ ಕೇಂದ್ರ, ಕುರಿಕುಪ್ಪ, ಬಳ್ಳಾರಿ ಜಿಲ್ಲೆ	36 26	30 94	36 17
5	ಜಾನುವಾರು ತಳಿ ಸಂವರ್ಧನಾ ಕೇಂದ್ರ ಮುನಿರಾಬಾದ್, ರಾಯಚೂರು ಜಿಲ್ಲೆ	4 28	5 68	4 56
6	ಜಾನುವಾರು ತಳಿ ಸಂವರ್ಧನಾ ಕೇಂದ್ರ, ಕೊಯ್ಲಾ ದ ಕ ಜಿಲ್ಲೆ	13 5	18 28	23 11
7	ಜರ್ಸಿ ತಳಿ ಸಂವರ್ಧನಾ ಕೇಂದ್ರ ಕೂಡಿಗೆ, ಕೊಡಗು ಜಿಲ್ಲೆ	13 92	21 19	16 71
8	ಎಮ್ಮೆ ತಳಿ ಸಂವರ್ಧನಾ ಕೇಂದ್ರ	12 33	13 12	11 76
9	ಖಿಲ್ಲಾಳ್ ತಳಿ ಸಂವರ್ಧನಾ ಕೇಂದ್ರ, ಬರಕಾಪುರ, ಹಾವೇರಿ ಜಿಲ್ಲೆ	18 64	16 11	21 38
10	ಹಳ್ಳಿಕಾರ್ ತಳಿ ಸಂವರ್ಧನಾ ಕೇಂದ್ರ, ಕುಣಿಕೇನಹಳ್ಳಿ, ತುಮಕೂರು ಜಿಲ್ಲೆ	8 00	13 11	8 88
11	ಅಮೃತ್ ಮಹಲ್ ತಳಿ ಸಂವರ್ಧನಾ ಕೇಂದ್ರ ಅಜ್ಜಂಪುರ ಚಿಕ್ಕಮಗಳೂರು ಜಿಲ್ಲೆ ಮತ್ತು ಉಪಕೇಂದ್ರಗಳು (ಬೀರೂರು, ಲಿಂಗದಹಳ್ಳಿ ಬಾಸೂರು, ಚಿಕ್ಕಮಗಳೂರು, ಕ್ಯೆನೋಡು ಹಾಗೂ ಹಬ್ಬನಘಟ್ಟ)	36 925	28 67	15 61
	ಒಟ್ಟು	**439 365**	**498 13**	**409 72**

ಅನುಬಂಧ–3

(ರೂ ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಕ್ಷೇತ್ರದ ಹೆಸರು	2004–05	2005–06	2006–07
1	ರಾಜ್ಯ ಜಾನುವಾರು ತಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ ಹೆಸರಘಟ್ಟ	15 75	29 29	10 82
2	ಜಾನುವಾರು ತಳಿ ಸಂವರ್ಧನಾ ಕ್ಷೇತ್ರ, ಹೆಸರಘಟ್ಟ	40 41	44 36	27 9
3	ಜಾನುವಾರು ತಳಿ ಸಂವರ್ಧನಾ ಕೇಂದ್ರ, ಧಾರವಾಡ ಜಿಲ್ಲೆ	17 75	26 29	24 66
4	ಜಾನುವಾರು ತಳಿ ಸಂವರ್ಧನಾ ಕೇಂದ್ರ, ಕುರಿಕುಪ್ಪ, ಬಳ್ಳಾರಿ ಜಿಲ್ಲೆ	5 21	5 25	3 66
5	ಜಾನುವಾರು ತಳಿ ಸಂವರ್ಧನಾ ಕೇಂದ್ರ ಮುನಿರಾಬಾದ್, ರಾಯಚೂರು ಜಿಲ್ಲೆ	1 7	0 78	0
6	ಜಾನುವಾರು ತಳಿ ಸಂವರ್ಧನಾ ಕೇಂದ್ರ, ಕೊಯ್ಲಾ ದ ಕ ಜಿಲ್ಲೆ	5 25	7 5	6 00
7	ಜರ್ಸಿ ತಳಿ ಸಂವರ್ಧನಾ ಕೇಂದ್ರ ಕೂಡಿಗೆ, ಕೊಡಗು ಜಿಲ್ಲೆ	3 78	22 03	11 79
8	ಎಮ್ಮೆ ತಳಿ ಸಂವರ್ಧನಾ ಕೇಂದ್ರ	12 04	14 29	6 553
9	ಖಿಲ್ಲಾಳ್ ತಳಿ ಸಂವರ್ಧನಾ ಕೇಂದ್ರ, ಬಂಕಾಪುರ, ಹಾವೇರಿ ಜಿಲ್ಲೆ	4 9	5 52	4 93

10	ಹಳ್ಳಿಕಾರ್ ತಳಿ ಸಂವರ್ಧನಾ ಕೇಂದ್ರ, ಕುಣಿಕೇನಹಳ್ಳಿ, ತುಮಕೂರು ಜಿಲ್ಲೆ	6 87	8 08	5 44
11	ಅಮೃತ್ ಮಹಲ್ ತಳಿ ಸಂವರ್ಧನಾ ಕೇಂದ್ರ ಅಜ್ಜಂಪುರ ಚಿಕ್ಕಮಗಳೂರು ಜಿಲ್ಲೆ ಮತ್ತು ಉಪಕೇಂದ್ರಗಳು (ಬೀರೂರು, ಲಿಂಗದಹಳ್ಳಿ ಬಾಸೂರು, ಚಿಕ್ಕಮಗಳೂರು, ಕ್ಯೆನೋಡು ಹಾಗೂ ಹಬ್ಬನಘಟ್ಟ)	5 92	3 32	4 5
	ಒಟ್ಟು	**129 58**	**166 71**	**106.253**

576(700) ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ) ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2004–05, 2005–06 ಮತ್ತು 2006–07ರಲ್ಲಿ ಪಶುಪಾಲನಾ ಇಲಾಖೆಗೆ ಔಷಧಿ ಖರೀದಿಸಲು ವಿವಿಧ ಲೆಕ್ಕ ಶೀರ್ಷಿಕೆಯಲ್ಲಿ ಒದಗಿಸಲಾದ ಅನುದಾನವೆಷ್ಟು?

ಆ) ಈ ಮೇಲಿನ ವರ್ಷಗಳಲ್ಲಿ ಔಷಧಿಯನ್ನು ಖರೀದಿಸಲು ಅನುಸರಿಸಲಾದ ಮಾನದಂಡವೇನು?

ಇ) ಔಷಧಿ ಖರೀದಿಯ ನಂತರ ಯಾವ ರೀತಿ ವಿತರಣೆ ಮಾಡಲಾಗಿದೆ ಹಾಗೂ ಇದರ ಸದ್ಬಳಕೆಗೆ ಇಲಾಖೆಯು ತೆಗೆದುಕೊಂಡ ಕ್ರಮವೇನು?

ಈ) ಪ್ರತಿ ಜಿಲ್ಲಾ ಪಶು ಚಿಕಿತ್ಸಾ ಕೇಂದ್ರಗಳಿಗೆ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳ ಬೇಡಿಕೆಗೆ ಅನುಗುಣವಾಗಿ ಔಷಧಿಗಳನ್ನು ಒದಗಿಸಲಾಗುತ್ತಿದೆಯೇ?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ರಾಜ್ಯವಲಯ ಹಾಗೂ ಜಿಲ್ಲಾ ವಲಯದಲ್ಲಿ ಕಳೆದ 3 ವರ್ಷಗಳಲ್ಲಿ ರೂ 4312 26 ಲಕ್ಷಗಳ ಅನುದಾನ ಔಷಧಿ ಖರೀದಿಗಾಗಿ ಒದಗಿಸಲಾಗಿದೆ ವಿವರ ಈ ಕೆಳಗೆ ನೀಡಿದೆ